ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಗಂರುವಾರ ದಿನಾಂಕ ೨೮ನೇ ಜನವರಿ ೧೯೮೮, ಮಾಘ, ೮, ೧೯೦೯, ಶಕ

ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಸದನವು ಬೆಳಿಗ್ಗೆ ೧೧–೦೦ ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಬಿ. ಜಿ. ಬಣಕಾರ್) ಅವರು ಪೀಠವನ್ನಲಂಕರಿಸಿದ್ದರು.

೧೧-೦೦ ಎ. ಎಂ.

ಸಂತಾಪ ಸೂಚನೆ

ಅಧ್ಯಕ್ಷರು.—ಮಾಜಿ ಶಾಸಕರಾದ ಶ್ರೀಯುತ ಕೆ. ಆರ್. ಹೊನ್ನಪ್ಪನವರು ದಿನಾಂಕ ೨೫-೧-೮೮ರಂದು ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇನೆ. ಶ್ರೀಯುತರು ಕಡೂರು ವಿಧಾನ ಸಭಾ ಕ್ಷೇತ್ರದಿಂದ ೫ನೇ ವಿಧಾನ ಸಭೆಗೆ ಆಯ್ಕೆಯಾಗಿ ತಮ್ಮ ಸೇವೆಯನ್ನು ಸಲ್ಲಿಸಿದ್ದಾರೆ. ನಿಧನ ಹೊಂದಿದ ಸದಸ್ಯರು ಗೌರವದ ಅಂಗವಾಗಿ, ಮಾನ್ಯ ಸದಸ್ಯರೆಲ್ಲರೂ ಒಂದು ನಿಮಿಷ ಕಾಲ ಎದ್ದುನಿಂತು ಮೌನವನ್ನಾಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಸಭೆಯ ಸದಸ್ಯರೆಲ್ಲರೂ ಎದ್ದುನಿಂತು ಒಂದು ನಿಮಿಷ ಕಾಲ ಮೌನವನ್ನಾಚರಿಸಿದರು)

ಈ ಸಭೆಯಲ್ಲಿ ಅಂಗೀಕರಿಸಿದ ಸಂತಾಪ ಸೂಚಕ ನಿರ್ಣಯವನ್ನು ಅಗಲಿದ ಸದಸ್ಯರ ಕುಟುಂಬಕ್ಕೆ ಮಂಗಳಹಿಸಿಕೊಡಲಾಗುವುದು.

ಪಂನವಿ

ವಿಧಾನ ಪರಿಷತ್ತಿನ ವಿರೋಧಪಕ್ಷದ ನಾಯಕರನ್ನು ಅಮಾನತ್ತಿನಲ್ಲಿಟ್ಟಿರುವುದನ್ನು ರಿಪೋರ್ಟ್ ಮಾಡುವ ಬಗ್ಗೆ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ, ಈಗಾಗಲೇ ನಾನು ತಮ್ಮಲ್ಲಿ ಮನವಿ ಮಾಡಿಕೊಂಡಹಾಗೆ, ಮೇಲ್ಮನೆಯಲ್ಲಿ ವಿರೋಧ ಪಕ್ಷದ ನಾಯಕರಾದ ಶ್ರೀಮಾನ್ ಟಿ. ಎನ್. ನರಸಿಂಹಮೂರ್ತಿ ಅವರನ್ನು ಮತ್ತು ಸದಸ್ಯರಾದ ಶ್ರೀ ಡಿ. ಬಿ. ಕಲ್ಮಣಕರ್ ಅವರು ಜನರಿಗೆ ನೇರವಾಗಿ ಸಂಬಂಧಪಡುವ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿ, ಈ ವಿಷಯಗಳನ್ನು ತೆಗೆದುಕೊಳ್ಳಬೇಕೆಂದು ಹೇಳಿದಾಗ, ಕೆಲವೊಂದು ವಿಷಾದನೀಯ ಘಟನೆ ನಡೆಯಿತು...

ಅಧ್ಯಕ್ಷರು.—ಅದರ ಮೆರಿಟ್ಸ್‌ಗೆ ತಾವು ಹೋಗಬೇಡಿ, ಏನಾಗಿದೆ, ಏನಾಗಬೇಕು ಅಷ್ಟನ್ನು ಮಾತ್ರ ಹೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಬಹುಶಃ ಪ್ರಜಾಪ್ರಭುತ್ವದಲ್ಲಿ ವಿರೋಧ ಪಕ್ಷದವರಿಗೂ ಕೂಡಾ ಜನರ ಹೇಳಿಕೆಯನ್ನು, ಅನಿಸಿಕೆಗಳನ್ನು ಈ ಸದನದ ಹಾಗೂ ಆ ಸದನದ ಮುಂದಿಡತಕ್ಕಂಥ ಅಧಿಕಾರ ಇದೆ, ಇದು ಅವರ ಆದ್ಯ ಕರ್ತವ್ಯ. ಆದರ ಪ್ರಕಾರ ಅವೊತ್ತು ಅಲ್ಲಿ ವಿರೋಧ ಪಕ್ಷದ ನಾಯಕರು, ಜನರ ಕಷ್ಟ ನಷ್ಟಗಳನ್ನು ಹೇಳುತ್ತಿರುವಾಗ

(ಮುಂದಲ)

ಶ್ರೀ ಜೆ. ಹೆಚ್. ಪಟೇಲ್.—ಅಧ್ಯಕ್ಷರೇ, ಇದನ್ನು ಯಾವ ಪ್ರಾವಿಜನ್‌ನಲ್ಲಿ, ಯಾವ ರೂಲ್‌ನಲ್ಲಿ ತೆಗೆದುಕೊಂಡಿದ್ದೀರಿ ?

SRI VEDANTHA HEMMIGE.—I am on a Point of Order. Sir, I am an a point of order...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— * * *

MR. SPEAKER.—Nothing will be recorded. Whatever you say will not go into the records.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ,—ಅಧ್ಯಕ್ಷರೆ,

MR. SPEAKAR.— Don t record. * * *

MR. SPEAKER.—It will not go to record. I will not allow you. Every thing will be expunged.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಿಮ್ಮನ್ನು ನಾನು ರಿಕ್ವೆಸ್ಟ್ ಮಾಡಿಕೊಳ್ಳುತ್ತಿದ್ದೇನೆ.

MR. SPEAKER.—3/4 Nothing will go on record, Whatever you say will be expunged,

(ಗೊಂದಲ)

ಅಧ್ಯಕ್ಷರು.—ನೀವು ಬಂದು ನನಗೆ ಏನು ಹೇಳಿದಿರಿ, ಏನೋ ಆಗಬಾರದಾಗಿತ್ತು, ಆಗಿದೆ ಸಸ್ಪೆನ್‌ಷನ್ ಆಗಿದೆ; ಅದನ್ನು ರಿವೋಕ್ ಮಾಡಿ ಎಂಬ ಮಾತನ್ನು ಸರಕಾರಕ್ಕೆ ಭಿನ್ನವಿಸಿಕೊಳ್ಳುತ್ತೇನೆ ಎಂಬ ಮಾತನ್ನು ಹೇಳಿದಿರಿ. ಆದನ್ನು ಬಿಟ್ಟು ನೀವು ಏನೇನೋ ಹೇಳಿದರೆ ಅದು ಆಗುವುದಿಲ್ಲ.

(ಗೊಂದಲ)

ಅಧ್ಯಕ್ಷರು.—ನನಗೆ ನೀವು ಏನು ಹೇಳಿದಿರಿ, ಆಗಬಾರದಿತ್ತು, ಆಗಿದೆ, ಸಸ್ಪೆನ್‌ಷನ್ ಮಾಡಿದ್ದಾರೆ ಎಂಟೈರ್ ಪೀರಿಯಡ್‌ಗೆ ಮಾಡಿದ್ದಾರೆ. ಅದನ್ನು ರಿವೋಕ್ ಮಾಡುವಂತೆ ಸರಕಾರಕ್ಕೆ ಭಿನ್ನವಿಸಿಕೊಳ್ಳುತ್ತೇನೆ ಎಂಬ ಮಾತನ್ನು ಹೇಳಿದಿರಿ, ಅದನ್ನು ಬಿಟ್ಟು ಈಗ ಹಾಗೆ ಆಗಿದೆ. ಹೀಗೆ ಆಗಿದೆ ಎಂದು ಹೇಳುತ್ತಿದ್ದೀರಿ. ಅಲ್ಲಿ ಸಸ್ಪೆನ್‌ಷನ್ ಆಗಿದ್ದರೆ ಅದು ಆ ಸದನಕ್ಕೆ ಸಂಬಂಧಪಟ್ಟದ್ದು ಇಲ್ಲಿಗೆ ಸಂಬಂಧಿಸಿದ್ದಲ್ಲ, ಇಲ್ಲ ಆಗಿದ್ದರೆ ಅಲ್ಲಿಗೆ ಸಂಬಂಧಿಸಿದ್ದಲ್ಲ, ಆದರೂ ಕೂಡಾ ತಾವು ಏನೋ ಹೇಳಿದಿರಿ ಎಂದು ಅವಕಾಶ ಕೊಟ್ಟಿದ್ದೇನೆ.

(ಗೊಂದಲ)

ಅಧ್ಯಕ್ಷರು.—ಸರಕಾರಕ್ಕೆ ಭಿನ್ನವಿಸಿಕೊಳ್ಳುತ್ತೇನೆ, ಸರಕಾರಕ್ಕೆ ಮನವಿ ಮಾಡಿ ರಿಕ್ವೆಸ್ಟ್ ಮಾಡಿಕೊಳ್ಳುತ್ತೇನೆ ಎನ್ನುವ ಮಾತನ್ನು ಹೇಳಿದಿರಿ, ಈಗ ಮನವಿ ಮಾಡುವುದನ್ನು ಬಿಟ್ಟು you are going to justify it. I will not allow you to speak.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ. ಅನೇಕ ವಿಷಯಗಳ ಮೇಲೆ ಅವರು ಮಾತನಾಡತಕ್ಕಂಥ ಅವಕಾಶ ಇತ್ತು. ಅವಕಾಶವನ್ನು ಮೊಟಕು ಮಾಡಿದ್ದಾರೆ. ಅದಕ್ಕೋಸ್ಕರ ಈ ಸದನದಲ್ಲಿ ಈ ವಿಚಾರವನ್ನು ರೈಜ್ ಮಾಡಿರುತ್ತೇವೆ

PROF A. LAKSHMI SAGAR—Sir, I am on a point of order.

ಅಧ್ಯಕ್ಷರು.—ರೈಜ್ ಮಾಡುವುದಿದ್ದರೆ ಕೊಶ್ಚನ್ ನವರ್ ಆದಮೇಲೆ ರೈಜ್ ಮಾಡಿ ಹಿಂಡಿನಲ್ಲಿ ರೈಜ್ ಮಾಡಬಹುದು ಈಗ ಅವಕಾಶ ಇಲ್ಲ.

* (Not recorded as orderd by the Chair)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ವಿರೋಧ ಪಕ್ಷದವರಿಗೆ ಹೆದರಿಸಬೇಕು ಸಪ್ರೆಸ್ ಮಾಡಬೇಕು ಎಂಬ ಭಾವನೆ ತಳೆದಿರುವ ಈ ಸರಕಾರದ ವಿರುದ್ಧ, ಈ ಸರಕಾರದ ತಂತ್ರದ ವಿರುದ್ಧ ಇವತ್ತು ಎಲ್ಲಿಯ ವರೆಗೆ ಅವರು ನಮ್ಮ ಬೇಡಿಕೆಯನ್ನು ಸಸ್ಪೆಂಡ್ ಮಾಡುವುದಿಲ್ಲ, ಸಸ್ಪೆನ್‌ಷನ್ ವಿತ್‌ಡ್ರಾ ಮಾಡಿ ಕೊಳ್ಳುವುದಿಲ್ಲ, ನಮ್ಮ ವಿಚಾರಗಳನ್ನು, ಜನರ ಸಮಸ್ಯೆಗಳನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಮಾಡಿಕೊಡುವುದಿಲ್ಲ ಅಲ್ಲಿಯವರೆಗೆ ನಾವೂ ಸಹ ಬಹಿಷ್ಕಾರ ಮಾಡಬೇಕಾಗುತ್ತದೆ. ಈ ಸದನಕ್ಕೆ ನಾವು ಬರುವುದಿಲ್ಲ ಎಂದು ಹೇಳಬೇಕಾಗುತ್ತದೆ.

Prof A. LAKSHMI SAGAR.—I am on a point of order.....

MR. SPEAKER.—You can request the Government to reconsider for the revocation of suspension. ಆ ಸದನದ ವಿಚಾರ ಏನಿದ್ದರೂ ಅಲ್ಲಿ, ಆ ಸದನದ ವಿಚಾರವನ್ನು ಇಲ್ಲಿ ಏತಕ್ಕೆ ತರುತ್ತೀರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಸರಕಾರ ಇಲ್ಲೂ ಒಂದೇ, ಅಲ್ಲೂ ಒಂದೇ. ಸರಕಾರ ಬೇರೆ ಅಲ್ಲ.

ಅಧ್ಯಕ್ಷರು.—ಅವರು ಏನೋ ಪಾಯಿಂಟ್ ಆಫ್ ಆರ್ಡರ್ ಕೇಳುತ್ತಿದ್ದಾರೆ, ಈಗ ತಾವು ದಯವಿಟ್ಟು ಕುಳಿತುಕೊಳ್ಳಿ ಅವರ ಪಾಯಿಂಟ್ ಆಫ್ ಆರ್ಡರ್ ಇದೆ, ತಾವು ಕುಳಿತುಕೊಳ್ಳಿ.

ಪ್ರೊ॥ ಎ. ಲಕ್ಷ್ಮೀಸಾಗರ್ —ಮಾನ್ಯ ಅಧ್ಯಕ್ಷರೇ ನನ್ನಗೊಂದು ಪಾಯಿಂಟ್ ಆಫ್ ಆರ್ಡರ್ ಇದೆ.

ಅಧ್ಯಕ್ಷರು.— ಆ ಸದನದಲ್ಲಿ ನಡೆದಿದ್ದು ಈ ಸದನಕ್ಕೆ ಸಂಬಂಧವಿಲ್ಲ ಆ ಸದನದಲ್ಲಿ ನಡೆದಿದ್ದೇ ಬೇರೆ ಈ ಸದನದಲ್ಲಿ ನಡೆದಿದ್ದೇ ಬೇರೆ. ಆದ್ದರಿಂದ ತಾವು ದಯವಿಟ್ಟು ಕುಳಿತು ಕೊಳ್ಳಿ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಈ ಸದನದಿಂದಲೇ ಮಾನ್ಯ ಮುಖ್ಯ ಮಂತ್ರಿಗಳು ಮುಖ್ಯ ಮಂತ್ರಿಗಳಾಗಿ ಚುನಾಯಿಸಿ ಹೋಗಿರುವುದು.

(ಗೊಂದಲ)

ಅಧ್ಯಕ್ಷರು.—ಆ ಸದನದ ವಿಷಯ ಈ ಸದನದಲ್ಲಿ ಚರ್ಚೆ ಮಾಡುವುದಕ್ಕೆ ಬರುವುದಿಲ್ಲ. ತಾವು ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಪ್ರೊ॥ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ...

ಅಧ್ಯಕ್ಷರು.—ತಾವು ದಯವಿಟ್ಟು ಕುಳಿತುಕೊಳ್ಳಿ. ಪಾಯಿಂಟ್ ಆಫ್ ಆರ್ಡರ್ ಇದೆ. ಅದೇನೋ ಕೇಳೋಣ.

ಶ್ರೀ ಎಸ್. ಬಂಗಾರಪ್ಪ.—ಪ್ರಶ್ನೋತ್ತರ ವೇಳೆಯಲ್ಲಿ ಪಾಯಿಂಟ್ ಆಫ್ ಆರ್ಡರ್ ಎಲ್ಲಿಂದ ಬರುತ್ತದೆ ಮಂತ್ರಿ ರೂಲ್ಸ್‌ನಲ್ಲಿ ಎಲ್ಲಿದೆ ?

ಅಧ್ಯಕ್ಷರು.—ದಯವಿಟ್ಟು ತಾವು ಕುಳಿತು ಕೊಳ್ಳಿ. ರೂಲ್ಸ್‌ನ್ನು ನಾನು ನೋಡಿದ್ದೇನೆ. ಪಾಯಿಂಟ್ ಆಫ್ ಆರ್ಡರ್ ರೈಜ್ ಮಾಡುವುದಕ್ಕೆ ನಾನು ಪರ್ಮಿಶನ್ ಕೊಟ್ಟಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ಎಲ್ಲಿದೆ ?

ಅಧ್ಯಕ್ಷರು.—ಎಲ್ಲಿದ ಗಿಲ್ಲಿದೆ ಎಂದು ಕೇಳಬೇಡಿ. ತಾವು ದಯವಿಟ್ಟು ಕುಳಿತುಕೊಳ್ಳಿ. It is his discretionary power.

SRI S. BANGARAPPA.—No, no

ಅಧ್ಯಕ್ಷರು.—ತಾವು ನನ್ನ ಛೇಂಬರ್‌ಗೆ ಬಂದು ಏನು ಹೇಳಿದಿರಿ ಯಾವುದೋ ಒಂದು ವಿಷಯಗಳಿಗೆ ಯಲ್ಲಿ ಏನೋ ಆಗಬಾರದ್ದು ಆಗಿದೆ, ಆದ್ದರಿಂದ ನಾವು ಸರ್ಕಾರಕ್ಕೆ ಅವರ ಸಸ್ಪೆನ್‌ಷನ್ ಅನ್ನು

ಕ್ಯಾನ್ಸಲ್ ಮಾಡಲು ಮನವಿ ಮಾಡಿಕೊಳ್ಳುತ್ತೇವೆ ಎಂದು. ಆದರೆ ತಾವು ಅದನ್ನು ಇಲ್ಲಿ ಮಾಡುತ್ತಿಲ್ಲ. ಅದಂ ಬಿಟ್ಟು ತಾವು ಏನೇನೋ ಹೇಳುವುದಕ್ಕೆ ಹೊರಟರೆ ಹೇಗೆ ?

ಶ್ರೀ ಎಂ. ಶಿವಣ್ಣ.—ಅದಕ್ಕೆ ಸ್ವಲ್ಪ ಟೈಮ್ ಕೊಡಿ.

ಅಧ್ಯಕ್ಷರು.—ತಾವು ಮಾತನಾಡುತ್ತಾ ಪ್ರಜಾಪ್ರಭುತ್ವದಲ್ಲಿ ನಮ್ಮನ್ನು ತಿಳಿಯಪತ್ತಿದ್ದಾರೆ, ಅದು ಮಾಡುತ್ತಿದ್ದಾರೆ, ಇದು ಮಾಡುತ್ತಿದ್ದಾರೆ ಎಂದು ಹೇಳಿದರೆ ಹೇಗೆ ?

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ.—ವಿರೋಧಪಕ್ಷದ ನಾಯಕರನ್ನು ಸಸ್‌ಪೆನ್‌ಷನ್ ಮಾಡಿದರೆ ಹೇಗೆ ?

ಅಧ್ಯಕ್ಷರು.—ನೀವು ಸರ್ಕಾರಕ್ಕೆ ಮನವಿ ಸಲ್ಲಿಸುವುದನ್ನು ಬಿಟ್ಟು ಬೇರೆ ಏನೋ ಹೇಳುವುದಕ್ಕೆ ಹೊರಟರೆ ಹೇಗೆ ? ನೀವು ನೇರವಾಗಿ ಸರ್ಕಾರಕ್ಕೆ ತಮ್ಮ ರಿಕ್ವೆಸ್ಟ್‌ನ್ನು ಸಲ್ಲಿಸಿ.

ಶ್ರೀ ಎಸ್. ಬಂಗಾರಪ್ಪ.—ನಾವು ನಿಮ್ಮನ್ನು ರಿಕ್ವೆಸ್ಟ್ ಮಾಡುತ್ತೇವೆ.

ಪ್ರೊ॥ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಮಗೆ ಗೊತ್ತಿದೆ. ಮಾನ್ಯ ಮಂತ್ರಿಗಳು ಬಂತ್ತು.

ಅಧ್ಯಕ್ಷರು.—ಪಾಯಿಂಟ್ ಆಫ್ ಆರ್ಡರ್ ಎತ್ತುವುದಕ್ಕೆ ನಾನಂ ಅಪ್ಪಣೆ ಕೊಟ್ಟಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಮ್ಮನ್ನು ಬೇರೆ ಬೇರೆ ರೀತಿಯಿಂದ ಇಂಟರ್‌ಪ್ರಿಟೇಶನ್ ಮಾಡಿ ಡಿಸ್‌ಕಷನ್ ಮಾಡದಂತೆ ಮಾಡುತ್ತಿದ್ದಾರೆ. ಇಂತಹ ನೀತಿಯ ವಿರುದ್ಧ ನಾವು ಪ್ರತಿಭಟನೆ ಮಾಡಿ ಎಲ್ಲಿಯವರೆಗೆ ಮೇಲ್ಮನೆಯ ವಿರೋಧಪಕ್ಷದ ನಾಯಕರನ್ನು ಮತ್ತು ಇತರೆ ಸದಸ್ಯರ ಸಸ್‌ಪೆನ್‌ಷನ್‌ನ್ನು ಕ್ಯಾನ್ಸಲ್ ಮಾಡುವುದಿಲ್ಲವೋ ಅಲ್ಲಿಯವರೆಗೆ ನಾವು ಈ ಸದನವನ್ನು ಬಹಿಷ್ಕಾರ ಮಾಡಿ ಹೊರಗೆ ಹೋಗುತ್ತೇವೆ.

(ಕಾಂಗ್ರೆಸ್ (ಐ) ಪಕ್ಷದ ಸದಸ್ಯರು ಸಭಾತ್ಯಾಗ ಮಾಡಿದರು).

ಶ್ರೀ ಪಿ. ಜಿ. ಆರ್. ಸಿಂಧ್ಯಾ.—ಇದು ಅವರ ಸಂಸ್ಕೃತಿ ನಿಮ್ಮನ್ನು ನಾನು ಅಭಿನಂದಿಸುತ್ತೇನೆ.

ಪ್ರೊ॥ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ.....

ಶ್ರೀ ಎಂ. ಎಸ್. ಕೃಷ್ಣನ್. – ಮಾನ್ಯ ಅಧ್ಯಕ್ಷರೇ ನನಗೊಂದು ನಿಮಿಷ ಅವಕಾಶ ಕೊಡಿ.

ಪ್ರೊ॥ ಎ. ಲಕ್ಷ್ಮೀಸಾಗರ್.- ಮಾನ್ಯ ಅಧ್ಯಕ್ಷರೇ ವಿರೋಧಪಕ್ಷದ ಉಪನಾಯಂಕರು ತಮ್ಮ ಕಛೇರಿಯಲ್ಲಿ ಭೇಟಿ ಮಾಡಿ ತಮ್ಮ ಅಹವಾಲನ್ನು ತಮ್ಮ ವಂಖಾಂತರ ಸರ್ಕಾರಕ್ಕೆ ತಿಳಿಸಬೇಕೆಂದು ಮನವಿ ಸಲ್ಲಿಸಿ ತಮ್ಮ ಮನಸ್ಸಿನ ಒಳಹೊಕ್ಕಿದಾಗ ತಾವು ಉದಾರವಾಗಿ ಅವರಿಗೆ ಪ್ರಶ್ನೋತ್ತರ ಸಮಯವಾದರೂ, ನಿಯಮಾಳಿಗಳನ್ನು ಸ್ವಲ್ಪ ಕಾಲದವರಿಗೆ ವಂಂದಕ್ಕೆ ಹಾಕಿ ಅವರಿಗೆ ಅವರ ಅಭಿಪ್ರಾಯವನ್ನು ತಿಳಿಸಲು ಅನುಮತಿ ಕೊಟ್ಟಿರಿ.

ಅವರು ತಮ್ಮಲ್ಲಿ ಮನವಿ ಸಲ್ಲಿಸಿದ್ದ ಪ್ರಕಾರವೇ ಸರ್ಕಾರಕ್ಕೂ ಮನವಿಯನ್ನು ಸಲ್ಲಿಸುತ್ತಾರೆ ಎನ್ನುತಕ್ಕ ಭಾವನೆಯಿಂದ ತಾವು ಇದ್ದಿರಿ. ಆದರೆ ಸನ್ಮಾನ್ಯ ವಿರೋಧಪಕ್ಷದ ಉಪನಾಯಕರು ಸರ್ಕಾರವನ್ನು ಟೀಕೆ ಮಾಡತಕ್ಕಂಥಾದ್ದು, ಸರ್ಕಾರವನ್ನು ಬಯ್ಯುಳ ಶಬ್ದಗಳಿಂದ ಟೀಕೆ ಮಾಡತಕ್ಕ ಪ್ರಯತ್ನವನ್ನು ಮಾಡಿದರು. ಇವರಲ್ಲಿ ಕೆಲವಾರು ಅಂಶಗಳು ಸೇರಿಕೊಂಡಿವೆ ಅವ್ಯಗಳಲ್ಲಿ ಮೊದಲನೆಯದಾಗಿ, ಈ ಸಭೆಗೆ ಮತ್ತು ವಿಧಾನ ಪರಿಷತ್ತಿಗೆ ಸಭಾಕಲಾಪಗಳು ಹೇಗೆ ನಡೆಯಬೇಕು ಎಂಬುದರ ಬಗ್ಗೆ ನಾವುಗಳು ಬೇರೆ ಬೇರೆ ನಿಯಮಾವಳಿಗಳನ್ನು ಮಾಡಿದ್ದೇವೆ. ಸಂವಿಧಾನದ ಪ್ರಕಾರ ಬೇರೆ ಬೇರೆ ಆರ್ಟಿಕಲ್‌ಗಳ ಮೇಲೆ ಆ ಮನೆಯಲ್ಲಿ ಸಭೆ ಹೇಗೆ ನಡೆಯಂಬೇಕು ಎನ್ನುವುದಕ್ಕೆ ಅಲ್ಲಿನ ನಿಯಮಾವಳಿಗಳೇ ಬೇರೆ ಇವೆ. ಈ ಮನೆಯಲ್ಲಿ ಸಭೆ ಹೇಗೆ ನಡೆಯಬೇಕೆಂಬ ಬಗ್ಗೆ ಇಲ್ಲೇ ಬೇರೆ ನಿಯಮಾವಳಿಗಳು ಇವೆ. ಪ್ರತಿಯೊಂದು ಮಹಾ ಸಭೆಗೆ ಸಂವಿಧಾನದಲ್ಲಿ ಆಯಾಯಾ ಸಭೆಗೆ ಸೀಮಿತವಾದಂಥ ಮತ್ತು ಪ್ರತ್ಯೇಕವಾದಂಥ ಅಧಿಕಾರಿಗಳನ್ನು ಕೊಟ್ಟಿದ್ದಾರೆ ಈ ಮನೆಗಳ ನಿಯಮಾವಳಿಗಳ ಪ್ರಕಾರ ವಿಧಾನಪರಿಷತ್ತಿನಲ್ಲಿ ಏನೇನು ನಡೆಯುತ್ತದೆಯೋ ಅವುಗಳ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಅವಕಾಶವಿಲ್ಲ. ರೂಲ್ ೫೨೭ ಪ್ರಕಾರ ಈ ಮನೆಯಲ್ಲಿ ಮೇಲ್ಮನೆಯಲ್ಲಿ ನಡೆದಿರಂವ ವಿಷಯಂಗಳ ಬಗ್ಗೆ ಚರ್ಚೆ ಮಾಡುವಂತಿಲ್ಲ.

ಸ್ವಯತ್ತತೆ ಕೊಟ್ಟಿರತಕ್ಕಂಥ ಮತ್ತು ಅಧಿಕಾರವನ್ನು ಪಡೆದಿರತಕ್ಕಂಥ ಸಭೆಯ ಮಾನ್ಯ ಸದಸ್ಯರುಗಳಂ ಆವರಾಗಿದ್ದಾರೆ. ಈ ಸಭೆಯಲ್ಲಾಗಲೀ, ಆ ಸಭೆಯಲ್ಲಾಗಲೀ ನಿಯಮಾವಳಿಗಳಿಗೆ ಅನುಸಾರವಾಗಿ ನಡೆದುಕೊಂಡು ಹೋಗುವುದು ಮೊದಲಿನಿಂದಲೂ ನಡೆದುಕೊಂಡು ಬಂದಿದೆ. ಆದರೂ ಕೂಡ ನಾವು ದೊಡ್ಡ ಮನಸ್ಸು ಮಾಡಿ, ಅವರಿಗೆ ಇರತಕ್ಕಂಥ ಅಭಿಪ್ರಾಯಗಳನ್ನು ಹೇಳುವುದಕ್ಕೆ ಅನುಮತಿಯನ್ನು ಕೊಟ್ಟಿದ್ದೇವೆ. ಹಾಗೂ ತಮ್ಮ ಸದಭಿಪ್ರಾಯವನ್ನು ಮತ್ತು ಉದಾರ ಮನಸ್ಸನ್ನು ಅವರು ದುರುಪಯೋಗ ಪಡಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಿದರೆಂದು ನಾನು ವಿಷಾದದಿಂದ ಹೇಳುತ್ತೇನೆ. ಸಂಸದೀಯ ವ್ಯವಹಾರಗಳಲ್ಲಿ ನಂಬಿಕೆ ಇರತಕ್ಕಂಥ ಪ್ರತಿಯೊಬ್ಬರೂ ಕೂಡ ನಿಯಮಾವಳಿಗಳ ಪ್ರಕಾರ ನಡೆಯಿಕೊಳ್ಳಬೇಕು. ಆದರೆ, ಸನ್ಮಾನ್ಯ ವಿರೋಧಪಕ್ಷದವರು ಸಂಸದೀಯ ವ್ಯವಹಾರಗಳಿಗೆ ತದ್ ವಿರುದ್ಧವಾಗಿ ನಡೆದುಕೊಳ್ಳುತ್ತಿದ್ದೇವೆಂದು ಅವರು ಸಾಬೀತು ಮಾಡಿ ತೋರಿಸಿದ್ದಾರೆ. ಈ ಮನೆಯ ಸದಸ್ಯರನ್ನಾಗಲೀ, ಆ ಮನೆಯ ಸದಸ್ಯರನ್ನಾಗಲೀ ಹತ್ತಿಡತಕ್ಕಂಥ ಯಾವ ಕೆಲಸವನ್ನು ಸರ್ಕಾರ ಮಾಡಿಲ್ಲ. ನಾವು ಸುಮಾರು ೪೦ ವರ್ಷಗಳ ಕಾಲ ವಿರೋಧ ಪಕ್ಷದಲ್ಲಿ ಇದ್ದೆವು. ವಿರೋಧ ಪಕ್ಷದಲ್ಲಿದ್ದುಕೊಂಡು ನಿಯಮಾವಳಿಗಳ ಪ್ರಕಾರ, ಸಂವಿಧಾನದ ಪ್ರಕಾರ ಹೀಗೆ ನಡೆದುಕೊಳ್ಳಬೇಕೆಂದು ಬಹಳ ಕಷ್ಟು ಅನುಭವದಿಂದ ನಾವು ತಿಳಿದುಕೊಂಡಿದ್ದೇವೆ. ಜನರ ಅಭಿಮತದ ಪ್ರಕಾರ ಈ ದಿನ ನಾವು ಈ ಕಡೆ ಬಂದಿದ್ದೇವೆ. ಮೊದಲು ಅಧಿಕಾರದಲ್ಲಿ ಇದ್ದಂಥ ಗುಂಗು ಅವರಿಗೆ ಇನ್ನೂ ಹೋಗಿಲ್ಲವೆಂದು ಕಾಣುತ್ತದೆ. They are not able to reconcile their position as members of the opposition. Mentally psychologically they are unprepared to sit there and participate in the deliberations of this House. ಇದನ್ನು ಅವರು ತಮ್ಮ ವರ್ತನೆಯಿಂದ ತೋರಿಸಿಕೊಂಡಿದ್ದಾರೆ. ನಾವು ಯಾರ ಬಾಯನ್ನಾಗಲೀ ಯಾರ ಅಭಿಪ್ರಾಯಗಳನ್ನಾಗಲಿ ಹತ್ತಿಡತಕ್ಕಂಥ ಧೋರಣೆಯ ಸಂಸ್ಕೃತಿ ನಮ್ಮಲ್ಲಿ ಯಾರಿಗೂ ಇಲ್ಲ ಸಂವಿಧಾನವನ್ನು ಬದಿಗೊತ್ತಿ, ಸಂಸ್ಕೃತಿಯ ಕಲಾಪಗಳನ್ನು ಬದಿಗೊತ್ತಿ, ಕಾನೂನನ್ನು ಬುಡಮೇಲು ಮಾಡತಕ್ಕಂಥ ಪ್ರವೃತ್ತಿ ನಮ್ಮಲ್ಲಿ ಇಲ್ಲ.

ಶ್ರೀ ಯು. ಭೂಪತಿ.—ಕ್ರಿಯಾಲೋಪ ಹೇಳುತ್ತಿದ್ದಾರೋ ? ಭಾಷಣ ಮಾಡುತ್ತಿದ್ದಾರೋ ? ಎಂದು ಗೊತ್ತಿಲ್ಲ' He is making a speech.

(ಗೊಂದಲ)

ಶ್ರೀ ಯು. ಭೂಪತಿ.—ಕ್ರಿಯಾಲೋಪ ಎಂದು ಭಾಷಣವನ್ನೇ ಮಾಡುತ್ತಿದ್ದಾರೆ.

ಅಧ್ಯಕ್ಷರು.—ಸ್ವಲ್ಪ ಡಿಸಿಪ್ಲೀನ್ ಆಗಿ ಕಂಳಿತುಕೊಂಡು ಕೇಳಿ.

ಶ್ರೀ ಯು. ಭೂಪತಿ.—ಕ್ರಿಯಾಲೋಪ ಎತ್ತಿರುವಾಗ, ಭಾಷಣ ಮಾಡಿಕೊಂಡು ಹೋಗುತ್ತಿದ್ದಾರೆ.

ಅಧ್ಯಕ್ಷರು.—ಅವರು ವಿರೋಧಪಕ್ಷದಲ್ಲಿ ನಾಯಕರಾಗಿ ಕೆಲಸ ಮಾಡಿದ್ದಾರೆ, ಶಾಸಕರಾಗಿ ಕೆಲಸ ಮಾಡಿದ್ದಾರೆ, ಮಂತ್ರಿಗಳಾಗಿ ಕೆಲಸ ಮಾಡಿದ್ದಾರೆ. ನಿಮಗಿಂತ ಇವರಿಗೆ ಅನುಭವ ಇದೆ. ಸುಮ್ಮನೆ ಕುಳಿತುಕೊಂಡು ಕೇ .

ಶ್ರೀ ಯು. ಭೂಪತಿ.—ಭಾಷಣ ಮಾಡುವ ಹಾಗಿದ್ದರೆ, ಸಪರೇಟ್ ಸೆಮಿನಾರ್ ಮಾಡಲಿ,

ಶ್ರೀ ಎ ಲಕ್ಷ್ಮೀಸಾಗರ್.—ಸಂವಿಧಾನಬದ್ಧವಾದಂಥ, ನಿಯಮಾವಳಿಗಳಿಗೆ ಬದ್ಧವಾದಂಥ ವಿಚಾರವನ್ನು ತಮ್ಮ ಅನುಮತಿ ಕೋರಿ ಈ ಸಭೆಯ ಮುಂದೆ ಇಡುವುದಕ್ಕೆ ನಾವು ಯಾವತ್ತೂ ಯಾರಿಗೂ ಅಡ್ಡಿಪಡಿಸಿಲ್ಲ ಸಂವಿಧಾನ ಬದ್ಧವಾಗಿ, ನಿಯಮಗಳಿಗೆ ಬದ್ಧವಾಗಿ, ಅವುಗಳಿಗೆ ಅನುಸಾರವಾಗಿ, ಈ ಸಭೆಯಲ್ಲಿ ವಿರೋಧಪಕ್ಷದ ಯಾವ ಮಾನ್ಯ ಸದಸ್ಯರುಗಳು ಎತ್ತಿದ ಅಭಿಪ್ರಾಯಗಳನ್ನು ತಮ್ಮ ಕಟುವಾದಂತಹ ಮತ್ತು ಸಭ್ಯವಾದಂಥ ಭಾಷೆಯಲ್ಲಿ ಈ ಸಭೆಯಲ್ಲಿ ಚರ್ಚೆ ಮಾಡುವುದಕ್ಕೆ ನಾವು ಎಂದೂ ವಿರೋಧವಾಗಿ ಆಗಿಲ್ಲ. ಇದು ನಮ್ಮ ರಾಜಕೀಯ ಸಂಸ್ಕೃತಿಯ ಇತಿಮಿತಿಯ ಅರಿವು ಮತ್ತು ಆಳವಾದಂಥ, ಮೂಲ ಭೂತವಾದಂಥ ಅಭಿಪ್ರಾಯವೂ ಆಗಿದೆ. ಆದರೆ ಅವರು ಈ ಸಭೆಯ ನಿಯಮಗಳನ್ನು ಧಿಕ್ಕಾರ ಮಾಡಿ, ಸಂವಿಧಾನ ಬದ್ಧವಾದಂತಹ ಅಧಿಕಾರವನ್ನು ಧಿಕ್ಕಾರ ಮಾಡಿ, ಎಲ್ಲಾ ನಿಯಮಗಳನ್ನು ಬದಿಗೊತ್ತಿ, ನಾಶಮಾಡುವಂಥ ಒಂದು ವರ್ತನೆಯನ್ನು ಇಲ್ಲಿ

ತೋರಿಸಿದ್ದಾರೆ. ಒಂದು ವಿಷಯವನ್ನು ನಾನು ಹೇಳಬಯಸುವುದೇನೆಂದರೆ. ಆ ಮೇಲ್ಮನೆಯಲ್ಲಿ ನಡೆದಂತಹ ವಿಧ್ಯಮಾನಗಳ ಬಗ್ಗೆ ಈ ಮನೆಯಲ್ಲಿ ತೀರ್ಮಾನ ತೆಗೆದುಕೊಳ್ಳುವುದಕ್ಕೆ ನಿಯಮಗಳ ಪ್ರಕಾರ ಅವಕಾಶವಿಲ್ಲ. ಅಲ್ಲಿಯ ಅವರ ನಿಯಮಗಳ ಪ್ರಕಾರ ಅಲ್ಲಿ ಏನು ನಡೆಯಿತು ? ಏನು ನಡೆಯ ಬೇಕಾಗಿರಲಿಲ್ಲ ? ಅವರು ಮಾಡಿದ್ದು ಸರಿಯೇ ಅಥವಾ ತಪ್ಪೇ ಎಂದು ತೀರ್ಮಾನ ಮಾಡತಕ್ಕಂಥ ಅಧಿಕಾರ, ಸಂವಿಧಾನದತ್ತವಾದಂಥ ಅಧಿಕಾರ ವಿಧಾನ ಪರಿಷತ್ತಿಗೆ ಇದೆ. ಅದನ್ನು ನಾವು ಇಲ್ಲಿ ಮಾಡುವುದಕ್ಕಾಗುವುದಿಲ್ಲ. ಅಲ್ಲಿಯ ಕೆಲವು ಮಾನ್ಯ ಸದಸ್ಯರು ಆದ ಘಟನೆಗಳ ಬಗ್ಗೆ ಮಂದೆ ಹೀಗೆ ಆಗಬಾರದೆಂ ಈ ವಿಷಯದ ಬಗ್ಗೆ ಸೂಕ್ತ ರೀತಿಯಲ್ಲಿ ಒಂದು ತೀರ್ಮಾನಕ್ಕೆ ಬರೋಣ, ಆ ಕಾಲಕ್ಕೂ ಈ ವಿಷಯವನ್ನು ಇಲ್ಲಿಗೆ ಮುಕ್ತಾಯ ಮಾಡಿ ಎಂದು ಒಂದು ಸಲಹೆಯನ್ನು ಕೂಡ ಕೊಟ್ಟಿದ್ದಾರೆ. ಆದರೆ ಜಿಲ್ಲೆಯ ಕೆಲವು ವಿಧಾನ ಪರಿಷತ್ ಸದಸ್ಯರು ಏನೂ ಮಾಡಿದ್ದಾರೆ ಎಂದು ಅಧ್ಯಕ್ಷರ ಮೇಲೆ ನಮಗೆ ನಂಬಿಕೆ ಇಲ್ಲ ಎಂಬ ಒಂದು ಸೂಚನೆಯನ್ನು ಆಗಲೇ ಕೊಟ್ಟಿದ್ದಾರೆ. ಸಭಾಧ್ಯಕ್ಷರಿಗೆ ಅಪಮಾನ ಆಗತಕ್ಕಂಥ ರೀತಿಯಲ್ಲಿ ಬೈಗಳನ್ನು ಬೈದರೆ, ಯಾರೂ ಸುಮ್ಮನೆ ಕುಳಿತುಕೊಳ್ಳುವುದ ಕ್ಕಾಗುವುದಿಲ್ಲ. ತಮಗೆ ಈ ಮನೆಯ ಸದಸ್ಯರೆಲ್ಲರೂ ಸೇರಿ ಅಧ್ಯಕ್ಷ ಸ್ಥಾನವನ್ನು ಕೊಟ್ಟಿದ್ದಾರೆ. ಈ ಸಭೆಯ ಘನತೆಗೌರವಗಳನ್ನು ಅನುಸರಿಸುವುದಲ್ಲಿ, ನಿಯಮಬದ್ಧವಾಗಿ, ತಾವುಗಳು ಏನು ತೀರ್ಮಾನ ಗಳನ್ನು ಕೊಡುತ್ತಿರೋ ಅದರ ಪ್ರಕಾರ ನಡೆದುಕೊಳ್ಳುವುದು ನಮ್ಮೆಲರ ಜವಾಬ್ದಾರಿಯೂ ಆಗಿರುತ್ತದೆ. ಅದನ್ನು ಬಿಟ್ಟು ಅವಾಚ್ಯ ಶಬ್ದಗಳಿಂದ ಅಧ್ಯಕ್ಷರನ್ನು ಬೈದರೆ ಹೇಗೆ ?

ಶ್ರೀ ಎಂ ಎಸ್ ಕೃಷ್ಣನ್.—ಅಧ್ಯಕ್ಷರೇ, ಕಿ ಯಾಲೋಪದ ಬಗ್ಗೆ ಅವರು ಮಾತನಾಡಬೇಕು...

ಪ್ರೊ. ಎ. ಲಕ್ಷ್ಮೀಸಾಗರ್ — ಆದುದರಿಂದ ನಾವು ಯಾವ ಕಾನೂನಿನ ವಿರುದ್ಧವಾಗಿಯೂ ನಡೆದುಕೊಂಡಿಲ್ಲ. ಸಂವಿಧಾನ ಮತ್ತು ನಿಯಮಗಳ ವಿರುದ್ಧವಾಗಿಯೂ ನಡೆದುಕೊಂಡಿಲ್ಲ. ಸದನ ದಲ್ಲಿ ಗೌರವಯುತವಾಗಿ, ಇಲ್ಲಿ ಅನ್ವಯವಾಗುವ ಕಾನೂನಿನ ಹಾಗೂ ನಿಯಮಗಳ ಪ್ರಕಾರವಾಗಿ ನಡೆಯಬೇಕು. ಅದನ್ನು ಮಿತಿಮೀರಿ ಯಾರೂ ನಡೆಯುವಂತಿಲ್ಲ. ಈ ಸದನದಲ್ಲಿ ಈಗ ನಡೆದಿರು ವುದನ್ನು ಎಲ್ಲರೂ ನೋಡಿದ್ದೇವೆ. ಇದರಿಂದ ಏನು ವ್ಯಕ್ತ ಆಗುತ್ತದೆ ಎಂದರೆ, ಈ ಸಂವಿಧಾನ ಬದ್ಧವಾದ ವ್ಯವಸ್ಥೆಯ ವಿಚಾರದಲ್ಲಿ ಅವರಿಗೆ ನಂಬಿಕೆ ಇಲ್ಲ ಎಂಬುದು ಸ್ಪಷ್ಟವಾಗುತ್ತದೆ. ಅದನ್ನು ಅವರು ತೋರಿಸಿಕೊಂಡಿದ್ದಾರೆ. ಆದುದರಿಂದ ಇದು ಸರ್ವಸಮ್ಮತವಾಗಿದೆ ಎಂದು ನಾನು ಅಂದು ಕೊಂಡಿದ್ದೇನೆ. ಆದುದರಿಂದ ಈ ನನ್ನ ಕ್ರಿಯಾಲೋಪವನ್ನು ಎತ್ತಿಹಿಡಿಯಬೇಕೆಂದು ನಾನು ಕೇಳಿ ಕೊಳ್ಳುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.— ಅಧ್ಯಕ್ಷರೆ.....

ಅಧ್ಯಕ್ಷರು.— ದಯವಿಟ್ಟು ತಾವು ಕುಳಿತುಕೊಳ್ಳಿ.....

ಶ್ರೀ ಎಂ. ಎಸ್. ಕೃಷ್ಣನ್.— ನಾನು ಅವರಿಗೆ ಸಮರ್ಥನೆ ಮಾಡುವ ರೀತಿಯಲ್ಲಿ, ಅದಕ್ಕೆ ಬೆಂಬಲ ಕೊಡುವ ರೀತಿಯಲ್ಲಿ ಮಾತನಾಡಬೇಕಾಗಿದೆ. ನಾನು ಒಂದು ವಿಷಯವನ್ನು ತಮ್ಮ ಗಮನಕ್ಕೆ ತರಲಿಚ್ಚಿಸುತ್ತೇನೆ. ನಿಯಮ ೨೮ರ ಪ್ರಕಾರ

> "On days allotted for the transaction of Govt. business such business shall have precedence and the Secretary shall arrange that business in such order as the Speaker may, in consultation with the Leader of the House determine.
>
> "Provided that such order of business shall not be varied on the day that business is set down for disposal unless the Speaker is satisfied that there is sufficient ground for such variation."

ಅಂದರೆ, ಇವೊತ್ತು ಆರ್ಡರ್ ಅನ್ನು ಏನು ಮಾಡಿದ್ದಾರೆ ಅದಕ್ಕೆ ತಮಗೆ ಅಧಿಕಾರ ಇದೆ. ಆದರೆ ಅದಕ್ಕೆ ಒಂದು ಕಾರಣ ಬೇಕು. ಹಾಗೆ ಮಾಡುವ ವಿಷಯವು ಕಾರಣೀಭೂತವಾಗಿ ಇರಬೇಕು. ಇವೊತ್ತು ಪ್ರಶ್ನೋತ್ತರ ಮೇಲೆ ಮೊದಲು ಆಗಬೇಕಾಗಿತ್ತು ಆದರೆ ಅದನ್ನು ಬದಲಾವಣೆ ಮಾಡಿ ಸ್ವಲ್ಪ ವಂದಕ್ಕೆ ಹಾಕಿದ್ದೀರಿ, ಹಾಗೆ ಆಗತ್ಯ ಸಮಯದಲ್ಲಿ ಬದಲಾವಣೆ ಮಾಡುವ ಅಧಿಕಾರ ತಮಗೆ ಇದೆ.

ಆದರೆ ಹಾಗೆ ಮುಂದೆ ಹಾಕಬೇಕಾದರೆ ಅದಕ್ಕೆ ಮೂಲಭೂತವಾದ ಕಾರಣಗಳು ಇರಬೇಕು. ಆ ಕಾರಣಗಳು ಏನು ಎಂಬುದನ್ನು ದಯಮಾಡಿ ತಾವು ಹೇಳಬೇಕು. ವಿರೋಧಪಕ್ಷದವರು ತಮ್ಮ ಹೆತ್ತಿರ ಬಂದು ಮಾತನಾಡಿದರು ಎಂದಷ್ಟೇ ಹೇಳಿದರು. You were satisfied and you allowed them. ತಾವು ಹಾಗೆ ಆಲೋ ಮಾಡಿದ್ದು ಸರಿಯೇ ಎನ್ನುವುದು ನಮ್ಮ ಮುಂದಿರುವ ಪ್ರಶ್ನೆ. Further Sir, the Rule 34 reads thus.

> 'A list of business for the day shall be prepared by the Secretary and a copy thereof together with other papers, if any, shall be made available for the use of every member, the previous day:
>
> Provided the Speaker may suspend the operation of this rule in respect of any particular day or days."

Here, there is a provision for suspension of operation of this rule in respect of any particular day or days. This rule is to circumvent Rule 312. ಯಾವುದೋ ಒಂದು ಪರ್ಸನಲ್ ಎಕ್ಸ್‌ಪ್ಲನೇಷನ್ ಕೊಡಬಹುದು ಅದನ್ನು ತಾವು ಒಪ್ಪಿಕೊಳ್ಳಬಹುದು ಇಲ್ಲವೇ ಇನ್ನಾವುದಾದರೂ ವಿಷಯ ಹೇಳಬಹುದು ಅದನ್ನು ತಾವು ಐದು ನಿಮಿಷದಲ್ಲಿ ಒಪ್ಪಿಕೊಳ್ಳಬಹುದು. ರೂಲ್ 312ರ ಪ್ರಕಾರ ಏನು ಕೊಟ್ಟಿದ್ದೀರಿ ಆ ರೀತಿ ಕೊಟ್ಟಿರುವುದು ಸರಿಯೇ ಎಂದು ವಿಮರ್ಶೆ ಮಾಡಬೇಕು ಎಂದು ಅವರು ರೆಫರೆನ್ಸ್ ಮಾಡಿದ್ದಾರೆ ನಿಯಮ 312ರಲ್ಲಿ ಈ ರೀತಿ ಇದೆ.

> "No speech made in the Council shall be quoted in the House unless it is a definite statement of policy by a Minister." ಎಂದು

ಡಿಫೆನೆಟ್ ಸ್ಟೇಟ್‌ಮೆಂಟ್ ಪಾಲಿಸಿ ಬಗ್ಗೆ ಮಾತನಾಡಲಿಲ್ಲ. ವಿರೋಧ ಪಕ್ಷದ ನಾಯಕರನ್ನು ಹೊರಕ್ಕೆ ಅಟ್ಟಿದರು. ಅವರು ಮಾಡಿದ್ದು ಸರಿಯಿಲ್ಲ, ಪ್ರಜಾಪ್ರಭುತ್ವಕ್ಕೆ ವಿರೋಧ ಹಾಗೇ ಹೀಗೆ ಎಂದು ಸರಕಾರದ ಮೇಲೆ ಟೀಕೆ ಮಾಡಿ ಹೊರಟುಹೋದರು. ಈ ರೂಲ್‌ಗೆ ಒಂದು ಪ್ರೊವಿಸೋ ಇದೆ ಅದು ಈ ರೀತಿ ಇದೆ.

> "Provided that the Speaker on a request being made to a him in advance give permission to a member to quote a speech or make reference to the proceedings in the Council if the Speaker thinks that such a course is necessary in order to enable the member to develop a point of privilege or procedure." ಎಂದು.

ಪ್ರೊಸೀಜರ್ ಬಗ್ಗೆ ಮಾತನಾಡಲಿಲ್ಲ ಪ್ರಿವಿಲೇಜ್ ಬಗ್ಗೆ ಮಾತನಾಡಲಿಲ್ಲ. ವಿರೋಧಪಕ್ಷದಲ್ಲಿರುವವರನ್ನು ಹೊರಕ್ಕೆ ಅಟ್ಟಿದರು ದಬ್ಬಾಳಿಕೆಯಾಗಿದೆ, ಪ್ರಜಾಪ್ರಭುತ್ವಕ್ಕೆ ವಿರೋಧ ಎನ್ನುವ ರೀತಿಯಲ್ಲಿ ಜೇಳಿ ಬಾಯ್‌ಕಾಟ್ ಮಾಡಿ ಎದ್ದು ಹೋಗಿದ್ದಾರೆ. ನನ್ನ ಅಭಿಪ್ರಾಯವಲ್ಲಿ ಹೇಳುವುದಾದರೆ ತಾವು ಹೊಸ ಪ್ರಿಸಿಡೆನ್ಸ್ ಮಾಡುತ್ತೀದ್ದೀರಿ ಎಂದು ಅನ್ನಿಸುತ್ತದೆ. ಅವರಿಗೆ ಅಧಿಕಾರವಿದೆ ಆ ಅಧಿಕಾರವನ್ನು ಸರಿಯಾದ ರೀತಿಯಲ್ಲಿ ಉಪಯೋಗ ಮಾಡಿಕೊಳ್ಳಬೇಕಾಗಿತ್ತು. ಅವರು ಆ ರೀತಿ ಮಾಡಿಲ್ಲವೆಂದೂ ಹೇಳಬೇಕಾಗುತ್ತದೆ, ನಾವು ಕೂಡ ವಿರೋಧ ಪಕ್ಷಕ್ಕೆ ಸೇರಿದವರು, ಆದರೆ ಅವರು ಮಾಡಿದ್ದಕ್ಕೆಲ್ಲಾ ಅವರು ತಪ್ಪು ಮಾಡಿದ್ದರೆ ತಪ್ಪು ಎಂದು ಹೇಳುತ್ತೇವೆ, ಸರಿ ಮಾಡಿದ್ದರೆ ಸರಿ ಎಂದು ಹೇಳುತ್ತೇವೆ, ವಿರೋಧ ಮಾಡುವುದಲ್ಲ ಟೀಕೆ ಮಾಡುತ್ತೇವೆ, ಜನತಾಪಕ್ಷ ಮಾಡಿದ್ದೆಲ್ಲಾ ಸರಿ ಎಂದು ಹೇಳುವ ಇಲ್ಲವೇ ಅವರ ತಾಳಕ್ಕೆ ಕುಣಿಯುವ ಇಲ್ಲವೇ ತಾಳ ಹಾಕುವುದಿಲ್ಲ. ಇಲ್ಲಿ ಸಿ.ಪಿ.ಐ.ನವರು ಇದ್ದಾರೆ, ಬಿ.ಜೆ.ಪಿ.ಯವರೂ ಇದ್ದಾರೆ. ನಾವು ಒಬ್ಬರು ಎದ್ದು ನಿಂತರೆ ಅವರು ೫ ಜನ ಎದ್ದು ನಿಲ್ಲುತ್ತಾರೆ ಇದರಿಂದಾಗಿ ನಮಗೆ ಚರ್ಚೆ ಮಾಡುವುದಕ್ಕೆ ಇಲ್ಲಿ ಅವಕಾಶವಿಲ್ಲದಂತಾಗಿದೆ. ಹೀಗಾದರೆ ನಾವು ಹೇಗೆ

ಮಾತನಾಡುವುದು ನಮ್ಮ ರಕ್ಷಣೆಗೆ ನೀವು ಬರಬೇಕು ನಾನು ಒಬ್ಬ ನೀವು ಒಬ್ಬರು. ಅವರು ಐದು ಜನ ಎದ್ದು ನಿಂತು ಮಾತನಾಡುತ್ತಾರೆ, ಗಟ್ಟಿಗಟ್ಟಲೆ ಮಾತನಾಡುತ್ತಾರೆ ಇಂತಹ ಒಂದು ಪ್ರವೃತ್ತಿಯನ್ನು ತಾವು ನಿಲ್ಲಿಸಬೇಕು. ಇದನ್ನು ನಿಲ್ಲಿಸದೇ ಹೋದರೆ ಖಂಡಿತವಾಗಿ ತೊಂದರೆಯಾಗುತ್ತದೆ. ಬಿಜಿನೆಸ್ ಅಡ್ವೈಸರಿ ಕಮಿಟಿಯಲ್ಲಿ ವಿರೋಧ ಪಕ್ಷದವರನ್ನು ಕರೆಯಿಸಿ ಚರ್ಚೆ ಮಾಡಿ ಒಂದು ತೀರ್ಮಾನಕ್ಕೆ ಬರಬೇಕು.

ಅಧ್ಯಕ್ಷರು. — ಯಾವಾಗಲೂ ಹೀಗೆ ಹೇಳುತ್ತಿದ್ದರೆ ಬಹಳ ಸಂತೋಷವಾಗುತ್ತದೆ.

ಎಂ. ಎಸ್ ಕೃಷ್ಣನ್. —ಮೊನ್ನೆ ಮಾನ್ಯ ಯಡಿಯೂರಪ್ಪನವರು ಗಟ್ಟಿಯಾಗಿ ಕಿರುಚಿಕೊಂಡರು ಮೈಕ್ ಒಡೆದು ಹೋಯಿತು. ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇದ್ದರೆ ಸರಿಯಾದ ರೀತಿಯಲ್ಲಿ ಅವರು ನಡೆದುಕೊಳ್ಳಲಿ. ಪ್ರಶ್ನೆಗಳನ್ನು ಬೇಕಾದರೆ ಎತ್ತಲಿ ಟೀಕೆ ಮಾಡಲಿ, ವಿರೋಧ ಮಾಡಲೀ—ಬೇಡವೆಂದು ಹೇಳುವುದಿಲ್ಲ ಈ ನನ್ನ ಕ್ರಿಯಾಲೋಪ ಏನಿದೆ ಇದರ ಬಗ್ಗೆ ಸ್ಪಷ್ಟತೆ ಇರಲಿ ಎಂದು ಹೇಳುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ — ಮಾನ್ಯ ಅಧ್ಯಕ್ಷರೇ, ವಿಶೇಷವಾದಂತಹ ಸಂದರ್ಭದಲ್ಲಿ ಜನತೆಯ ಹಿತದೃಷ್ಟಿಯಿಂದ ಎಲ್ಲಾ ರೂಲ್‌ಗಳನ್ನು ಸಸ್ಪೆಂಡ್ ಮಾಡಿ ಅವಕಾಶ ಮಾಡಿಕೊಡುವ ಅಧಿಕಾರ ತಮಗೆ ಇದೆ. ತಮ್ಮ ಚೇಂಬರ್‌ನಲ್ಲಿ ಬಂದು ಮಾತನಾಡಿದಾಗ ವಿಧಾನ ಪರಿಷತ್ತಿನಲ್ಲಿ ನಡೆದಿರತಕ್ಕಂತಹ ಘಟನೆ ಏನಿದೆ ಇದು ಆಗಬಾರದಿತ್ತು ಎಂಬುದರ ಬಗ್ಗೆ ಮತ್ತು ತೆಗೆದುಕೊಂಡ ಕ್ರಮವನ್ನು ರಿವೋಕ್ ಮಾಡಿ ಎಂದು ಹೇಳುತ್ತಾರೆಂದು ಭಾವಿಸಿಕೊಂಡು ತಾವು ಅವಕಾಶವನ್ನು ಮಾಡಿಕೊಟ್ಟರಿ ಆದರೆ ಅವರು ಅದನ್ನು ದುರುಪಯೋಗ ಮಾಡಿಕೊಳ್ಳುವಂತಹ ಪ್ರಯತ್ನವನ್ನು ಮಾಡಿದ್ದಾರೆ.

ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ವಿಧಾನ ಪರಿಷತ್ತಿನಲ್ಲಿ, ವಿಧಾನ ಸಭೆಯಲ್ಲಿ ಕೆಲಸ ಮಾಡುತ್ತಿರುವಂತಹ ಸಂದರ್ಭದಲ್ಲಿ ಕೆಲವು ವಿಶೇಷವಾದ ಘಟನೆ, ಕಹಿ ಪ್ರಸಂಗ ಬಂದಾಗ ಇಂತಹ ಘಟನೆಗಳು ನಡೆಯುವುದು ಸ್ವಾಭಾವಿಕ, ನಾನು ಅದರ ಬಗ್ಗೆ ಚರ್ಚೆಗೆ ಹೋಗುವುದಿಲ್ಲ. ಸಭಾಪತಿಗಳ ಬಗ್ಗೆ ಅನುಚಿತವಾಗಿ ವರ್ತನೆ ಮಾಡಿದರು, ಅದಕ್ಕೋಸ್ಕರ ಸಸ್ಪೆಂಡ್ ಮಾಡಿದ್ದಾರೆ. ಇದು ನಮ್ಮ ಮನಸ್ಸಿಗೂ ನೋವಾಗಿದೆ. ಅಧ್ಯಕ್ಷರ ಬಗ್ಗೆ ಈ ರೀತಿಯ ವರ್ತನೆ ಮಾಡುವುದು ಪದ್ಧತಿ ಆಲ್ಲ, ಸರಿಯೂ ಅಲ್ಲ. ಇನ್ನು ಎಷ್ಟು ದೂರ ಎಳೆದುಕೊಂಡು ಹೋಗುವುದಕ್ಕೆ ಸಾಧ್ಯವಿದೆ. ತಪ್ಪಿಗೆ ಅಧಿಕಾರವಿದೆ ಅವರನ್ನು ಕರೆದು ಮಾತನಾಡುವುದಕ್ಕೆ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ವಿರೋಧ ಪಕ್ಷದ ಸದಸ್ಯರನ್ನು ಹೊರಗಿಟ್ಟು ಸಭೆಯ ಕಲಾಪವನ್ನು ನಡೆಸುವುದು ಪದ್ಧತಿ ಅಲ್ಲ, ಸರಿಯೂ ಅಲ್ಲ ಎಂಬುದನ್ನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

೧೧—೩೦ ಎ. ಎಂ.

ಈಗಾಗಲೇ ಇಂಥ ಕಹಿ ಪ್ರಸಂಗಗಳು ಬಂದಿರುವುದು ಇದೆ. ಶ್ರೀ ನರಸಿಂಹಮೂರ್ತಿಯವರ ಸಸ್ಪೆನ್ಷನ್ನನ್ನು ರಿವೋಕ್ ಮಾಡಿ ಅವರು ಮತ್ತೆ ಸದನಕ್ಕೆ ವಾಪಸ್ ಬರಲಿ, ಇಲ್ಲಿಯೂ ಸಹಾ ಎಲ್ಲರೂ ಸದನಕ್ಕೆ ಬರಲಿ, ಒಳ್ಳೆಯ ರೀತಿಯಲ್ಲಿ ಸದನದ ಕಾರ್ಯಕಲಾಪ ನಡೆಯುವುದಕ್ಕೆ ಅನುವು ಮಾಡಿಕೊಡಬೇಕೆಂದು ಸರ್ಕಾರವನ್ನು ತಮ್ಮ ಮೂಲಕ ವಿನಂತಿಸಿಕೊಳ್ಳುತ್ತೇನೆ. ಈ ತರಹ ಅನೇಕ ಸಾರಿ ಆಗಿದೆ. ಆ ಸಂದರ್ಭದಲ್ಲಿ ಕ್ಷಮಾಪಣೆಯನ್ನು ಕೇಳಬೇಕಾಗುತ್ತದೆ. ಇಲ್ಲಿ ಯಾವ ವ್ಯಕ್ತಿಯೂ ದೊಡ್ಡವನಲ್ಲ ಜನತೆಯ ಪ್ರತಿನಿಧಿಗಳಾಗಿ ಆರಿಸಿ ಬಂದಿರುವ ನಾವು ಕೆಲವು ವೇಳೆ ಉದ್ವೇಗಕ್ಕೆ ಒಳಗಾಗಿ ತಪ್ಪು ಮಾಡುತ್ತೇವೆ. ಆದರೆ ಆ ತಪ್ಪನ್ನು ಒಪ್ಪಿಕೊಳ್ಳುವ ಸೌಜನ್ಯವೂ ಕೂಡಾ ನಮ್ಮ ರಾಜಕೀಯಪಕ್ಷಗಳ ಮುಖಂಡರಲ್ಲಿ ಇರಬೇಕು. ಆದಕ್ಕೋಸ್ಕರವಾಗಿ ಮತ್ತೊಮ್ಮೆ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದು ಇಷ್ಟೆ. ಇವನ್ನು ದೀರ್ಘವಾಗಿ ಎಳೆದುಕೊಂಡು ಹೋಗದೆ ಅವರ ಸಸ್ಪೆನ್ಷನ್ ಆರ್ಡರನ್ನು ರಿವೋಕ್ ಮಾಡಿ ಸದನದ ಕಾರ್ಯಕಲಾಪ ವಿಧಾನಪರಿಷತ್ತು ಮತ್ತು ವಿಧಾನಸಭೆಯಲ್ಲಿ ನಡೆಸಿಕೊಡುವುದಕ್ಕೆ ಅನುವು ಮಾಡಿಕೊಡಬೇಕೆಂದು ಸರ್ಕಾರದವರಲ್ಲಿ ಮತ್ತೊಮ್ಮೆ ವಿನಂತಿಮಾಡಿಕೊಳ್ಳುತ್ತೇನೆ, ನಮ್ಮ ಕಾಂಗ್ರೆಸ್ ಮಿತ್ರರುಗಳು ವಾಕ್‌ಔಟ್ ಮಾಡಬಾರದಾಗಿತ್ತು. ಅಲ್ಲಿ ಸಭಾಪತಿಗಳು ತಪ್ಪು ಮಾಡಿದ್ದಾರೆ ಎಂದು ಹೇಳುವುದಕ್ಕೆ ಸಾಧ್ಯವೇ? ಅದನ್ನು ಇಲ್ಲಿ ಚರ್ಚೆ ಮಾಡುವುದಕ್ಕೆ ಸಾಧ್ಯವೇ? ಆ ಆರಿವು ನಮ್ಮ ವಿರೋಧಪಕ್ಷದವರಿಗೆ ಇರಬೇಕಾಗಿತ್ತು. ಈ ರೀತಿ ಮಾಡಿದ್ದಿ

ಒಟ್ಟಿನಲ್ಲಿ ಈ ರಾಜ್ಯದ ಜನತೆಯ ದುರಾದೃಷ್ಟ. ಇನ್ನು ಮುಂದೆ ಈ ರೀತಿ ಆಗದ ಹಾಗೆ ಯೋಚನೆ ಮಾಡಬೇಕು ಎಂದು ಈ ಸಂದರ್ಭದಲ್ಲಿ ತಮ್ಮ ಮೂಲಕ ಸರ್ಕಾರದವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು.—ರೂಲಿಂಗ್ ಕೊಡುವುದಕ್ಕೆ ಮೊದಲು ಕೆಲವು ಮಾತುಗಳನ್ನು ಹೇಳುತ್ತೇನೆ. I would like to quote Rule 346 of the Rules of Procedure and Conduct of Business in the Legislative Assembly : "All matters not specifically provided for these rules and all questions relating to the detailed working to these rules shall be regulated in such manner as the Speaker may from time to time direct."

Further Rule 28 says,

"Arrangement of Government business ; On days allotted for the transaction of Government business such business shall have precedence and the Secretary shall arrange that business in such order as the Speaker may, in consultation with the Leader of the House deter mine:

rovided that such order of business shall not be varied on the day that business is set down for disposal unless the Speaker is satisfied that there is sufficient ground for such variation.

ಈ ಪ್ರಕಾರವಾಗಿ ಬಂದರೆ ನನಗೆ ಕೆಲವು ಅಧಿಕಾರಗಳು ಇವೆ. ವಿರೋಧ-ಪಕ್ಷದ ಉಪ ನಾಯಕರಾದ ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ನನ್ನನ್ನು ಭೇಟಿ ಮಾಡಿ "ಏನೋ ಆಗಬಾರದ್ದು ಆಗಿ ಹೋಗಿದೆ ತಮ್ಮ ಮುಖಾಂತರ ಸರ್ಕಾರವನ್ನು ವಿನಂತಿ ಮಾಡಿಕೊಳ್ಳುತ್ತೇವೆ. ಸಸ್ಪೆನ್ಷನ್ ಆರ್ಡರನ್ನು ರಿವೋಕ್ ಮಾಡಿ" ಎಂದು ವಿನಂತಿಸಿಕೊಂಡರು. "To err is human ; to forgive is divine" ಇದರ ಪ್ರಕಾರ ಕ್ಷಮಾಪಣೆ ಮಾಡಬೇಕಾದ ಜವಾಬ್ದಾರಿಯೂ ವಿರೋಧ ಪಕ್ಷದ ಸದಸ್ಯರಿಗೂ ಇದೆ, ಆಡಳಿತ ಪಕ್ಷದ ಸದಸ್ಯರಿಗೂ ಇದೆ ಇಷ್ಟನ್ನು ಮಾತ್ರ ಹೇಳಿ ಎಂದು ಖರ್ಗೆಯವರಿಗೆ ಹೇಳಿದೆ. ಇದನ್ನು ಬಿಟ್ಟು ಬೇರೆ ಏನನ್ನೂ ಹೇಳಬೇಡಿ ಎಂದು ಹೇಳಿದರೂ ಕೂಡಾ ನಾನು ಕೊಟ್ಟಿಂಥ ಒಂದು ಅವಕಾಶವನ್ನು ಮಾನ್ಯ ಯಡಿಯೂರಪ್ಪನವರು ಹೇಳಿದ ಹಾಗೆ ಅದನ್ನು ದುರುಪಯೋಗಪಡಿಸಿಕೊಂಡು ಮಾನ್ಯ ಶ್ರೀ ಖರ್ಗೆಯವರು ಸೆಬ್ಜೆಕ್ಟ್ ಮ್ಯಾಟರ್‌ಗೆ ಹೋಗಿಬಿಟ್ಟರು. ಅವರು ಹಾಗೆ ಮಾಡಬಾರದಾಗಿತ್ತು ಅವರು ಇದನ್ನು ಎಕ್ಸೀಡ್ ಮಾಡಿದ್ದಾದು ಸರಿಯಲ್ಲ. ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿಗಳು ಏನೊಂದು ಕ್ರಿಯಾಲೋಪವನ್ನು ಎತ್ತಿದ್ದಾರೆ, ಅದು ನೂರಕ್ಕೆ ನೂರಷ್ಟು ಕರೆಕ್ಟ್ ಆಗಿದೆ. ಆ ಕ್ರಿಯಾ ಲೋಪವನ್ನು ನಾನು ಎತ್ತಿ ಹಿಡಿದಿದ್ದೇನೆ. ವಿರೋಧಪಕ್ಷದವರು ನಮ್ಮ ಸೌಜನ್ಯ ಏನು ದುರುಪಯೋಗಮಾಡಿಕೊಂಡಿದ್ದಾರೆ, ಅದು ಸರಿಯಲ್ಲ. ಈಗ ಮುಂದಿನ ಕಾರ್ಯಕಲಾಪಗಳಿಗೆ ಹೋಗೋಣ.

ಚುಂಕ್ಕಿಗುರುತಿನ ಪ್ರಶ್ನೆಗಳಿಗೆ ನೀಡಲಾದ ಬಾಯಿ ಮಾತಿನ ಉತ್ತರಗಳು

ಪ್ರಶ್ನೆ ಸಂಖ್ಯೆ. ೮೧ (೩೬೦) : ಶ್ರೀ ಎಂ. ಶಿವಣ್ಣ (ಗೈರುಹಾಜರಿ)

ಪ್ರಶ್ನೆ ಸಂಖ್ಯೆ : ೮೧ (೨೮೮) ಶ್ರೀ ಮಲ್ಲಿಕಾರ್ಜುನ ಖರ್ಗೆ (ಶ್ರೀಮತಿ ನಾಗರತ್ನಮ್ಮನವರ ಪರವಾಗಿ)

ಪ್ರಶ್ನೆ ಸಂಖ್ಯೆ : ೮೨ (೯೯೦) : ಶ್ರೀ ಬಿ. ಗುರುಪ್ರಸಾದ್ (ಗೈರುಹಾಜರಿ)